ಮೈಸೂರ ಗೆಜಿಟ.

ನಂ. 16 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1884.

ಬೆಂಗಳೂರು, ಶನಿವಾರ, ಏಪ್ರಿಲ್ ಶಾ॥ 19, ಸನ್ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು; ಮಿಲಿಟೇರಿ ಸಿಕ್ರಿಟೆರಿಯವರು, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟುವ ಸೆಷ್ಷ ಜಡ್ಜಿರು, ಡಿ॥ ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೊಲೀಸ್ ಸೂಪರ್ಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇರ್ಷಗಳು—ಇಲ್ಲಾ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 26ನೇ ಮಾರ್ಚೀ 1884.

ನಂ. 342.—ಈ ವಿಷಯವಾಗಿ ಹಾಲಿ ಜಾರೀಲಿ ಇರತಕ್ಕ ಹುಕ್ಕುಂಗಳನ್ನು ರದ್ದುಪಡಿಸಿ, ದೀವಾನ್ ಸಾಹೇಬರವರು ಹುಕ್ಕುಂ ಮಾಡುವದೇನಂದರೆ, ಬ್ರೀಜ್ ಆಫ್ ಕಂಟ್ರಾಕ್ಟು ಆಕ್ಟು ಅನುಸರಿಸಿ ಕೊಡಗು ದೇಶದಿಂದ ಕೊಡಲ್ಪಡುವ ಅವ್ವಲ್ ವಾರೆಂಟನ್ನು ಮೈಸೂರು ವೇಕದಲ್ಲಿ ಜಾರೀ ಮಾಡುವದಕ್ಕೋಸ್ಕರ 3 ರೂಪಾಯಿ ಫೀಜು ವಸೂಲ್ಮಾಡಲ್ಪಡತಕ್ಕದ್ದು.

ಅವ್ವಲ್ ವಾರೆಂಟುಗಳು ಜಾರೀ ಮಾಡಲ್ಪಡದೆ ಇದ್ದ ಸಂದರ್ಭಗಳಲ್ಲಿ ಎರಡನೇ ಮತ್ತು ತದನಂತರ ಕೊಡಲ್ಪಡುವ ವಾರೆಂಟುಗಳು ಯಾವ ಫೀಜು ಇಲ್ಲದೇನೆ ಜಾರೀ ಮಾಡಲ್ಪಡತಕ್ಕದ್ದು.

ನಂ. 343.—ಸ್ಯ 1870ನೇ ಇಸವಿ ಕೋರ್ಟ್ಸ್ ಫೀಜ್ ಆಕ್ಟಿನ 35ನೇ ಸೆಕ್ಷನ್‌ನಿಂದ ಉಂಟಾಗಿರುವ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಮೈಸೂರು ಶ್ರೀಮತ್ ಮಹಾರಾಜಾ ಸರಕಾರದವರು, ಸದರೀ ಆಕ್ಟಿನ 1ನೇ ಷೆಡ್ಯೂಲ್ 6, 7 ಮತ್ತು 9ನೇ ಕ್ಲಾಜ್‌ಗಳನುಸರಿಸಿ ಖಾಯಿಷ್ ಮಾಡುವ ಜನಗಳ ಮುದ್ದು ಉಪಯೋಗಕ್ಕೋಸ್ಕರ ಸಿವಿಲ್ ವ ಕ್ರಿಮಿನಲ್ ಕೋರ್ಟುಗಳಿಂದ ಕೊಡಲ್ಪಡುವ ನಕ್ಕಲ್‌ಗಳಿಗೋಸ್ಕರ ಕೊಡಬೇಕಾದ ಕೋರ್ಟು ಫೀಜನ್ನು ಮಾಫ್ ಮಾಡಿರುತ್ತಾರೆ.

ಆದರೆ, ಯಾವ ನ್ಯಾಯಸ್ಥಾನದಲ್ಲಿಯಾಗಲಿ ಸದರೀ ನಕ್ಕಲ್‌ಗಳು ದಾಖಲ್ಮಾಡುವಣ, ತೋರಿಸುವಣ, ಅಥವಾ ರಿಕಾರ್ಡಿಗೆ ಸೇರಿಸುವಣ್ಣ, ಅಥವಾ ಸರಕಾರ ಉದ್ಯೋಗಸ್ಥರಿಂದ ಬರಮಾಡಿ ಕೊಳ್ಳಲ್ಪಡುವಣ ಇಂಥಾ ಸಂದರ್ಭಗಳಲ್ಲಿ, ಆ ಪ್ರಕಾರ ಕೊಡಲ್ಪಡುವ ನಕ್ಕಲ್‌ಗಳಿಗೋಸ್ಕರ ವಸೂಲ್ಮಾಡಲ್ಪಡತಕ್ಕ ಫೀಜು ಮಾಫ್ ಮಾಡಲ್ಪಟ್ಟಿರುತ್ತೆ ಯಂದು ಈ ಇಸ್ತಿಹಾರ್‌ನಾಮೆಯಿಂದ ತಿಳಿಯತಕ್ಕದ್ದಲ್ಲವು.

ತಾರೀಖು 4ನೇ ಮಕ್ತಂ 1884.

ನಂ. 5.—ದೀವಾನ್‌ರವರ ಪ್ರೈವೇಟ್ ಸೆಕ್ರಿಟೇರಿಯವರಾದ ಮೆ॥ ಸಿ. ವಿ. ರಾಘವಾಚಾರ್‌ಲು ಬಿ. ಯೆ. ಯವರು ಮೈಸೂರು ಡಿಸ್ಟ್ರಿಕ್ಟಿನಲ್ಲಿ ಜನರಲ್ ಡ್ಯುಟೀಗಾಗಿ ನೇಮಿಸಲ್ಪಟ್ಟಿರುತ್ತಾರೆ. ಆಕೆಲಸದ ಮೇಲೆ ಇರತಕ್ಕ ಕಾಲದಲ್ಲಿ ರಿವಿನ್ಯೂಅಸಿಸ್ಟೆಂಟ್ ಕಮ್ಮಿಷನರವರ ಅಧಿಕಾರಗಳನ್ನು ಮತ್ತು 3ನೇ ಕ್ಲಾಸ್ ಮಾಜಿಸ್ಟ್ರೇಟರ ಅಧಿಕಾರಗಳನ್ನು ಅವರು ಚಲಾಯಿಸುವರು.

ನಂ. 6.—2ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರಾದ ಮೆ॥ ಬಿ. ಕೆ. ವೆಂಕಟವರದಯ್ಯಂಗಾರ್ರಿಗೆ 1884ನೇ ಇಸವಿ ಏಪ್ರಿಲ್ ಗುರ್ರೆ ತಾರೀಖು ಲಾಗಾಯತು 3 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೆ॥ ವೆಂಕಟವರದಯ್ಯಂಗಾರ್ರ ರಜಾದ ಮೇಲೆ ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಶಿವಮೊಗ್ಗಾ ತಾಲ್ಲೂಕು 1ನೇ ಗ್ರೇಡ್ ಅಮಲ್ದಾರ್ ಮೆ॥ ನಾಗೇಶರಾಯರು 4ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರಾಗಿ ಆಕ್ಟಿಂಗ್ ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತಾರೆ. ಮೆ॥ ನಾಗೇಶರಾಯರು ಸಾಧ್ಯವಾದಷ್ಟು ಜಾಗ್ರತೆಯಾಗಿ ಹೊರಟು ಕೆಲಸಕ್ಕೋಸ್ಕರ ಕಡೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರಲ್ಲಿ ರಿಪೋರ್ಟು ಮಾಡತಕ್ಕದ್ದು.

ಮೆ॥ ನಾಗೇಶರಾಯರು ಇತರ ಕೆಲಸದ ಮೇಲೆ ಇರುವ ಕಾಲದಲ್ಲಿ ಶಿವಮೊಗ್ಗಾ ಡಿ॥ ರೆವಿನ್ಯೂ ಶಿರಸ್ತೇದಾರ್ ನಾರಣಯ್ಯಂಗಾರ್ರವರು-ಮಾಹೇಯಾನಾ 150 ರೂಪಾಯಿ ತಲಬಿನಿಂದ ಶಿವಮೊಗ್ಗಾ ತಾಲ್ಲೂಕು ಅಮಲ್ದಾರ್ ಕೆಲಸ ನೋಡತಕ್ಕದ್ದು. ಇವರಿಗೆ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತವೆ.

ತಾರೀಖು 8ನೇ ಏಪ್ರಿಲ್ 1884.

ನಂ. 7.—ಕೋಲಾರ ಡಿಸ್ಟ್ರಿಕ್ಟು ಡೆ॥ ಕಮ್ಮಿಷನರ್ ಮೆ॥ ಸಿ. ಸುಬ್ಬರಾಯರಿಗೆ ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖು ಲಾಗಾಯತು 6 ದಿವಸಗಳ ಪ್ರಿವಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 21ನೇ ಮಾರ್ಚ್ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಿಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬವೋಜೀಬ್ ಹುಕ್ಕುಂ,

ಆರ್. ವಿಜಯೀಂದ್ರರಾವ್,

ಸೆಕ್ರಿಟೇರಿ.